**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬ್ಲೂಃ1 ಪಿ ಡಬ್ಲ್ಯೂಃ35**

**ಹೆಸರುಃ ಡಾ. ಚಂದ್ರಶೇಖರ ಕೊಂಡಗುಳಿಕರ**

**ತಂದೆ ಹೆಸರುಃ ಅಡಿವೆಪ್ಪ**

**ವಯಸ್ಸುಃ 64 ವರ್ಷಗಳು.**

**ಉದ್ಯೋಗಃ ಉಪನಿರ್ದೇಶಕ ಪಶುಪಾಲನ ಇಲಾಖೆ, ನಿವೃತ್ತರು**

**ವಾಸ ಸ್ಥಳಃ ಧಾರವಾಡ**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 18.03.2026**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು 2007 ರಿಂದ 2013 ರ ವರೆಗೆ ಪ್ರಭಾರ ಇಓ, ತಾಲ್ಲೂಕು ಪಂಚಾಯತ, ಕುಂದಗೋಳನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾ.ಸಾ-2 ರಿಂದ 5, 8, 15 ರವರ ಪರಿಚಯ ಇದೆ. ಚಾ.ಸಾ-6, 7, 9 ರಿಂದ 14, 16 ರಿಂದ 39 ರವರ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ 3 ಮತ್ತು 15 ನೇ ಆರೋಪಿತರ ಪರಿಚಯ ಇದೆ. ಈ ದಿನ ನ್ಯಾಯಾಲಯದ ಮುಂದೆ ಆರೋಪಿ 1, 2, 4 ರಿಂದ 6, 8 ರಿಂದ 14 ರವರು ಗೈರು ಹಾಜರಾಗಿದ್ದು ಅವರ ಪರಿಚಯ ಇದೆ. ಆರೋಪಿ 1, 2, 4 ರಿಂದ 6, 8 ರಿಂದ 14 ಪರ ವಕೀಲರು ಆರೋಪಿತರ ಗುರುತಿನ ತಕರಾರು ಇರುವುದಿಲ್ಲ ಎಂದು ವಿನಾಯತಿ ಅರ್ಜಿ ಸಲ್ಲಿಸಿರುತ್ತಾರೆ.

ಆರೋಪಿ 1, 2, 4 ಮತ್ತು 5 ರವರು ತಮ್ಮ ಅಧಿಕಾರ ಅವಧಿಯಲ್ಲಿ ಹಣ ದುರ್ಬಳಕೆ ಮಾಡಿರುವ ಬಗ್ಗೆ ದೂರನ್ನು ನೀಡಿದ್ದು ಅದು ಇಂಗಳಗಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಯೋಜನೆಗೆ ಸಂಬಂಧಪಟ್ಟ ಹಾಗೆ 2009-10 ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಪಟ್ಟ ಹಾಗೆ ಅವ್ಯವಹಾರ ಮಾಡಿರುತ್ತಾರೆ. ಆ ಬಗ್ಗೆ ತನಿಖಾಧಿಕಾರಿ ಎಂದು ಚಾ.ಸಾ-4 ರವರಿಗೆ ನೇಮಕ ಮಾಡಿದ್ದು, ಅವರು ತನಿಖೆ ಕೈಗೊಂಡು ವರದಿಯನ್ನು ಸಿಇಓ, ಜಿಲ್ಲಾ ಪಂಚಾಯತ, ಧಾರವಾಡ ಇವರಿಗೆ ನೀಡಿರುತ್ತಾರೆ. ಸಿಇಓ, ಜಿಲ್ಲಾ ಪಂಚಾಯತ, ಧಾರವಾಡ ಇವರು ನನಗೆ ಅವ್ಯವಹಾರ ಆಗಿದೆ ಆ ಬಗ್ಗೆ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲು ನನಗೆ ನಿರ್ದೇಶನ ನೀಡಿದರು. ದೂರು ನೀಡಬೇಕಾದ

ಆರೋಪಗಳ ಪೈಕಿ 3 ಜನರು ಗ್ರಾಮ ಪಂಚಾಯತ ಅಧ್ಯಕ್ಷರು ಆಗಿದ್ದು ಅವರ ಹೆಸರುಗಳು, 1. ಬಿ.ಎಸ್. ಕೋಟೆಣ್ಣವರ, ಇವರು 2009 ರಲ್ಲಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು. 2. ನೀಲವ್ವ ಭದ್ರಾಪೂರ, ಇವರು 2009 ರಿಂದ 2010 ರವರೆಗೆ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು. 3. ಮಮ್ತಾಜ ಬೇಗಂ ಶೇತಸನದಿ, ಇವರು 2010 ರಿಂದ ಸದರಿ ದೂರು ದಾಖಲಿಸುವವರೆಗೂ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.

2009-10 ನೇ ಸಾಲಿನಲ್ಲಿ ಮರೇಗಾ ಯೋಜನೆಯಲ್ಲಿ 4 ರಸ್ತೆಗಳನ್ನು ಮಾಡುವ ಆದೇಶ ಆಗಿದ್ದು, ಅದರಲ್ಲಿ ಮೊದಲನೆಯದಾಗಿ ಹಿರೇಬೂದಿಹಾಳದಿಂದ ಗುರುವಿನಹಳ್ಳಿ, ಹಿರೇಬೂದಿಹಾಳದಿಂದ ಮತ್ತಿಗಟ್ಟಿ, ಹಿರೇಬೂದಿಹಾಳದಿಂದ ವಾಯಾ ನೆಲಗುಡ್ಡದಿಂದ ತರ್ಲಘಟ್ಟವರೆಗೆ, ಇಂಗಳಗಿಯಿಂದ ತರ್ಲಘಟ್ಟವರೆಗೆ ಮತ್ತು ಇಂಗಳಗಿಯಿಂದ ಬಸನಾಳವರೆಗೆ.

ಹಿರೇಬೂದಿಹಾಳದಿಂದ ಗುರುವಿನಹಳ್ಳಿ ರಸ್ತೆಗೆ ರೂ.5,00,000/- ಫಂಡ್ಸ್ ಸ್ಯಾಂಕ್ಷನ್ ಆಗಿದ್ದು ಆ ಪೈಕಿ ರೂ.55,900/- ಮಾತ್ರ ಖರ್ಚು ಮಾಡಿರುತ್ತಾರೆ. ಒಟ್ಟಾರೆ ರೂ.5,00,000/- ಗಳಿಗೆ ಸಂಬಂಧಪಟ್ಟ ಹಾಗೆ ಆರೋಪಿತರು 80 ಜನ ಕೂಲಿಕಾರರ ಹೆಸರುಗಳನ್ನು ನಮೂದು ಮಾಡಿ ಎಲ್ಲ ಹಣವನ್ನು ಕೇವಲ 8 ಜನರ ಖಾತೆಗೆ ಮಾತ್ರ ಜಮಾ ಮಾಡಿರುತ್ತಾರೆ.

ಹಿರೇಬೂದಿಹಾಳದಿಂದ ಮತ್ತಿಗಟ್ಟಿ ರಸ್ತೆಗೆ ರೂ.8,15,000/- ಫಂಡ್ಸ್ ಸ್ಯಾಂಕ್ಷನ್ ಆಗಿದ್ದು ಆ ಪೈಕಿ ರೂ.73,821/- ಮಾತ್ರ ಖರ್ಚು ಮಾಡಿರುತ್ತಾರೆ. ಕೂಲಿಕಾರರ ನೇಮಕ ಮಾಡಿರುವ ಬಗ್ಗೆ ತನಿಖಾ ಸಮಯದಲ್ಲಿ ಎನ್.ಎಮ್.ಆರ್. ಗಳನ್ನು ಸಂಬಂಧಪಟ್ಟ ಪಂಚಾಯತ ಇವರು ನಮಗೆ ಪೂರೈಸಿರುವುದಿಲ್ಲ.

ಹಿರೇಬೂದಿಹಾಳದಿಂದ ವಾಯಾ ನೆಲಗುಡ್ಡದಿಂದ ತರ್ಲಘಟ್ಟ ರಸ್ತೆಗೆ ರೂ.10,00,000/- ಫಂಡ್ಸ್ ಸ್ಯಾಂಕ್ಷನ್ ಆಗಿದ್ದು ಆ ಪೈಕಿ ರೂ.5,32,746/- ಮಾತ್ರ ಖರ್ಚು ಮಾಡಿರುತ್ತಾರೆ. ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಬಹಳಷ್ಟು ಕೂಲಿಕಾರರ ಪಟ್ಟಿ ಮಾಡಿ ಹಣವನ್ನು ಕೆಲವೇ ಮಂದಿಗೆ ಮಾತ್ರ ವರ್ಗಾವಣೆ ಮಾಡಿರುತ್ತಾರೆ.

ಹಿರೇಬೂದಿಹಾಳದಿಂದ ಇಂಗಳಗಿ ತರ್ಲಘಟ್ಟ ರಸ್ತೆಗೆ ರೂ.5,00,000/- ಫಂಡ್ಸ್ ಸ್ಯಾಂಕ್ಷನ್ ಆಗಿದ್ದು ಆ ಪೈಕಿ ಭರಮಗೌಡ ದ್ಯಾವನಗೌಡ್ರ, ಕಾಂಟ್ರ್ಯಾಕ್ಟರ್ ಗೆ ರೂ.2,83,400/-

ಗಳನ್ನು ನಿಯಮ ಬಾಹಿರವಾಗಿ ವರ್ಗಾವಣೆ ಮಾಡಿರುತ್ತಾರೆ. ರೂ.1,54,590/- ಗಳನ್ನು ಅಶೋಕ ಶಿರೋಳ ಎನ್ನುವವರಿಗೆ ನಿಯಮಬಾಹಿರವಾಗಿ ವರ್ಗಾವಣೆ ಮಾಡಿರುತ್ತಾರೆ.

ಹಿರೇಬೂದಿಹಾಳದಿಂದ ಇಂಗಳಗಿ ಬಸನಾಳ ರಸ್ತೆಗೆ ಎಂದು ಯಾವುದೇ ಹಣ ನಿಗದಿ ಮಾಡದೆ ರೂ.70,658/- ಗಳನ್ನು ಖರ್ಚು ಮಾಡಿರುತ್ತಾರೆ.

ಹಿರೇಬೂದಿಹಾಳ ತರ್ಲಘಟ್ಟ ರಸ್ತೆಗೆ ಸಂಬಂಧಪಟ್ಟಂತೆ ಒಂದೇ ಮನೆತನದ 5 ಜನ ಸದಸ್ಯರಿಗೆ ಹಣವನ್ನು ವರ್ಗಾವಣೆ ಮಾಡಿರುತ್ತಾರೆ.

ಎನ್.ಎಮ್.ಆರ್. ಸಂಖ್ಯೆ 17 ರಲ್ಲಿ 118 ಜನರ ಕೂಲಿಕಾರರ ಹೆಸರುಗಳನ್ನು ದಾಖಲಿಸಿ ಕೂಲಿ ಪಾವತಿ ರೂ.2,42,256/- ಗಳ ಚಕ್ಕು ಬರೆದು ಕೇವಲ 6 ಜನ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸೂಚನೆ ಪತ್ರ ನೀಡಿರುತ್ತಾರೆ.

ಎನ್.ಎಮ್.ಆರ್. ಸಂಖ್ಯೆ 269 ರಲ್ಲಿ 150 ಜನರ ಕೂಲಿಕಾರರ ಹೆಸರುಗಳನ್ನು ದಾಖಲಿಸಿ ಅವರ ಕೂಲಿ ಪಾವತಿ ರೂ.2,18,600/- ಮೊತ್ತದ ಪೂರ್ತಿ ಹಣವನ್ನು ಕೇವಲ 5 ಜನರ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಅವರಲ್ಲಿ 1. ಹನಮಂತಗೌಡ ಸಿ. ಬನ್ನೂರ, ಇವರ ಬ್ಯಾಂಕ್ ಖಾತೆ ಸಂಖ್ಯೆ 740, ಎನ್.ಎಮ್.ಆರ್. ಸಂಖ್ಯೆ 17 ರ ಪ್ರಕಾರ ಮೊತ್ತ ರೂ.40,000/-. ಎನ್.ಎಮ್.ಆರ್. 269 ರ ಪ್ರಕಾರ ರೂ.43,700/- ಒಟ್ಟು ಮೊತ್ತ ರೂ.83,700/-. 2. ಸಾವಂತ್ರವ ಗು. ಬನ್ನೂರ, ಇವರ ಬ್ಯಾಂಕ್ ಖಾತೆ ಸಂಖ್ಯೆ 7098, ಎನ್.ಎಮ್.ಆರ್. ಸಂಖ್ಯೆ 17 ರ ಪ್ರಕಾರ ಮೊತ್ತ ರೂ.40,000/-, ಎನ್.ಎಮ್.ಆರ್. 269- ರ ಮೊತ್ತ ರೂ.40,000/-. 3. ಭರಮಪ್ಪ ಹ. ಸೋಮಣ್ಣವರ, ಇವರ ಬ್ಯಾಂಕ್ ಖಾತೆ ಸಂಖ್ಯೆ 8482, ಎನ್.ಎಮ್.ಆರ್. ಸಂಖ್ಯೆ 17 ರ ಪ್ರಕಾರ ಮೊತ್ತ ರೂ.40,000/-, ಎನ್.ಎಮ್.ಆರ್. 269- ರ ಪ್ರಕಾರ ಒಟ್ಟು ಮೊತ್ತ ರೂ.43,700/-, ಒಟ್ಟು ಮೊತ್ತ ರೂ.83,700/-. 4. ಶಿವನಗೌಡ ಬು. ಬನ್ನೂರ, ಇವರ ಬ್ಯಾಂಕ್ ಖಾತೆ ಸಂಖ್ಯೆ 6136, ಎನ್.ಎಮ್.ಆರ್. ಸಂಖ್ಯೆ 17 ರ ಪ್ರಕಾರ ಮೊತ್ತ ರೂ.40,000/-, ಎನ್.ಎಮ್.ಆರ್. 269- ರ ಒಟ್ಟು ಮೊತ್ತ ರೂ.43,700/-, ಒಟ್ಟು ಮೊತ್ತ ರೂ.83,700/-. 5. ವೀರನಗೌಡ ಹ. ಬನ್ನೂರ, ಇವರ ಬ್ಯಾಂಕ್ ಖಾತೆ ಸಂಖ್ಯೆ 4211, ಎನ್.ಎಮ್.ಆರ್. ಸಂಖ್ಯೆ 17 ರ ಪ್ರಕಾರ ಮೊತ್ತ ರೂ.40,000/-, ಎನ್.ಎಮ್.ಆರ್. 269- ರ ಪ್ರಕಾರ ಮೊತ್ತ ರೂ.43,700/-, ಒಟ್ಟು ಮೊತ್ತ ರೂ.83,700/-. 6. ಗುರುಸಿದ್ದಗೌಡ ಸಿ. ಬನ್ನೂರ, ಇವರ ಬ್ಯಾಂಕ್ ಖಾತೆ ಸಂಖ್ಯೆ 422, ಎನ್.ಎಮ್.ಆರ್. ಸಂಖ್ಯೆ 17 ರ ಪ್ರಕಾರ ಮೊತ್ತ

ರೂ.42,256/-, ಎನ್.ಎಮ್.ಆರ್. 269- ರ ಪ್ರಕಾರ ಮೊತ್ತ ರೂ.43,800/-, ಒಟ್ಟು ಮೊತ್ತ ರೂ.86,056/-. ಇದೇ ಕಾಮಗಾರಿಗೆ ಕ್ರಮವಾಗಿ ಚೆಕ್ ನಂಬರ್ಃ 944007, 944008 ಮತ್ತು 944009 ಕ್ರಮವಾಗಿ ರೂ.1,80,290/-, ರೂ.82,769/- ಮತ್ತು ರೂ.71,928/- ಒಟ್ಟು ರೂ.3,34,987/- ಗಳನ್ನು ದುರುಪಯೋಗಪಡಿಸಿಕೊಂಡಿದ್ದು ಕಂಡುಬಂದಿರುತ್ತದೆ.

ದಿನಾಂಕಃ 14.01.2015 ರಂದು ನಾನು ತನಿಖಾಧಿಕಾರಿ ಇವರಿಗೆ ಪುನಃ ಹೇಳಿಕೆ ನೀಡಿರುತ್ತೇನೆ. ಅದರಲ್ಲಿ ಕುಂದಗೋಳ-ಹಿರೇಬೂದಿಹಾಳ ಮತ್ತು ಗುರುವಿನಹಳ್ಳಿ ರಸ್ತೆ ನಮೂದು ಮಾಡಿರಲಿಲ್ಲ ಅದನ್ನು ರೂ.55,900/- ಎಂದು ನಮೂದು ಮಾಡಿರುತ್ತೇನೆ.

ಹಿರೇಬೂದಿಹಾಳ ಮತ್ತಿಗಟ್ಟಿ ರಸ್ತೆಯಲ್ಲಿ ಚೆಕ್ಕಿನಲ್ಲಿ ಇದ್ದ ಮೊತ್ತ ರೂ.73,821/- ಎಂದು ನಮೂದಿಸಲಾಗಿತ್ತು. ಈಗ ಚೆಕ್ ಪ್ರತಿಯನ್ನು ನೋಡಿದ ಮೇಲೆ ಅದರ ಮೊತ್ತವು ರೂ.72,821/- ಆಗಿತ್ತು.

ಕುಂದಗೋಳ ಇಂಗಳಗಿ ತರ್ಲಘಟ್ಟ ರಸ್ತೆ ಎನ್.ಎಮ್.ಆರ್. 61955 ರ ಪ್ರಕಾರ ಮೊತ್ತ ರೂ.1,52,600/-. 1. ಚೆಕ್ ಸಂಖ್ಯೆ 172556 ದಿನಾಂಕಃ 01.02.2010. 2. ಎನ್.ಎಮ್.ಆರ್. ಸಂಖ್ಯೆ 61176 ರ ಪ್ರಕಾರ ರೂ.1,30,800/- ಚೆಕ್ ಸಂಖ್ಯೆ 172557, ದಿನಾಂಕಃ 01.02.2010. 2. ಎನ್.ಎಮ್.ಆರ್. ಸಂಖ್ಯೆ 61175 ರ ಪ್ರಕಾರ ರೂ.1,54,590/-, ಚೆಕ್ ಸಂಖ್ಯೆ 172561, ದಿನಾಂಕಃ 20.03.2010. ಇದರಲ್ಲಿ ಎನಿ.ಎಮ್.ಆರ್. ಅನುಕ್ರಮ ಸಂಖ್ಯೆ 1 ಮತ್ತು 2 ರ ಒಟ್ಟು ಮೊತ್ತ ರೂ,2,83,400/- ಇದನ್ನು ಭರಮಗೌಡ ದ್ಯಾಮನಗೌಡ್ರ ಇವರಿಗೆ ಕಾನೂನು ಬಾಹಿರವಾಗಿ ವರ್ಗಾವಣೆ ಆಗಿರುತ್ತದೆ. ಅನುಕ್ರಮ ಸಂಖ್ಯೆ 3 ಒಟ್ಟು ಮೊತ್ತ ರೂ,1,54,590/- ಈ ಹಣವನ್ನು ಅಶೋಕ ವಿ. ಶಿರೋಳ ಇವರಿಗೆ ಕಾನೂನುಬಾಹಿರವಾಗಿ ವರ್ಗಾವಣೆ ಆಗಿರುತ್ತದೆ.

2009-10 ಹಾಗೂ 2010-11 ರಲ್ಲಿ ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿದ ಗ್ರಾಮ ಪಂಚಾಯತಿ ಅಧ್ಯಕ್ಷರು, ಆಡತಿತಾಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ಪಿ.ಡಿ.ಓ ಗಳು ಹಾಗು ಗ್ರಾಮ ಪಂಚಾಯತ ಕ್ಲಾರ್ಕ ಶಂಕ್ರಪ್ಪ ಸಂಗಣ್ಣವರ ಇವರೆಲ್ಲರೂ ಎಮ್.ಜಿ.ಎನ್.ಆರ್.ಇ.ಜಿ.ಎ ಯೋಜನೆ ಅನುಷ್ಟಾನಗೊಳಿಸಲು ಸರಕಾರಿದಿಂದ ಬಂದ ಅನುದಾನದ ಹಣವನ್ನು ಮೇಲಿನಂತೆ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ತಮ್ಮ ಸ್ವಂತ ಲಾಭಕ್ಕಾಗಿ ಎಲ್ಲರೂ ಸೇರಿಕೊಂಡು ಹಣವನ್ನು ದುರ್ಬಳಕೆ ಮಾಡಿಕೊಳ್ಳುವ ಮತ್ತು ಸರ್ಕಾರಕ್ಕೆ

ಕೂಲಿಕಾರರಿಗೆ ಮೋಸ, ನಂಬಿಕೆ ದ್ರೋಹ ಮಾಡುವುದರ ಉದ್ದೇಶ ಹೊಂದಿ ಖೊಟ್ಟಿಯಾಗಿ ಕೂಲಿಕಾರರ ಹಾಜರಾತಿ ಪಟ್ಟಿಗಳನ್ನು ತಯಾರಿಸಿ ಅದರಲ್ಲಿ ಹೆಚ್ಚಿನ ಜನರು ಕೂಲಿ ಕೆಲಸಕ್ಕೆ ಬಂದಂತೆ ತೋರಿಸಿ ಕೂಲಿಯ ಒಟ್ಟು ಮೊತ್ತವನ್ನು ಕೆಲವೇ ಜನರ ಖಾತೆಗೆ ಜಮಾ ಮಾಡಿ ಅವರಿಂದ ಹಣವನ್ನು ಪಡೆದು ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ಖೊಟ್ಟಿ ದಾಖಲೆಗಳನ್ನು ನಿಜ ದಾಖಲೆಗಳು ಎಂದು ನಂಬುವಂತೆ ಕಾರ್ಯಾಲಯದಲ್ಲಿ ಇಟ್ಟು ಸರಕಾರಕ್ಕೆ ಹಾಗೂ ಕೂಲಿಕಾರ ಜನರಿಗೆ ಮೋಸ ಹಾಗೂ ವಂಚನೆ ಮಾಡಿರುವ ಬಗ್ಗೆ ನಾನು ಆ ಪ್ರಕಾರವಾಗಿ ಸರಕಾರದ ಪರವಾಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿ ದೂರಿನ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದೂರಿನ ಪ್ರತಿಯನ್ನು ನಿ.ಪಿ-70 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-70 ಎ ಎಂದು ಗುರುತಿಸಲಾಯಿತು. ಸಾಕ್ಷಿ ತನಿಖಾಧಿಕಾರಿ ಇವರು ನೀಡಿರುವ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**
**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**
**ಕುಂದಗೋಳ.**